**ಪಿಡಬ್ಲೂ.1: Rudraprakash**

**ದಿನಾಂಕಃ 16-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಮಾನ್ಯ ವಕೀಲರಿಂದಃ**

ಆರೋಪಿಯು ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ನಿಮ್ಮ ಬಳಿ money lending license ಇರುವ ಕಾರಣ ಆರೋಪಿಗೆ ಬಡ್ಡಿಗಾಗಿ ಹಣ ನೀಡಿರುತ್ತೀರಿ ಎಂದರೆ ಸಾಕ್ಷಿಯು, ನನ್ನ ಬಳಿ license ಇದೆ, ಆದರೆ ನನ್ನ ವೈಯುಕ್ತಿಕ ಹಣವನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿರು ಸಹಿ ಆರೋಪಿಯದಾಗಿದ್ದು, ಅದರಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. 2014 ರಲ್ಲಿ ಹಣ ಕಾಸಿನ ವ್ಯವಹಾರ ಆಗಿದ್ದು, 2021 ರಲ್ಲಿ ಪ್ರಕರಣ ದಾಖಲಿಸಿದ್ದೀರಾ ಎಂದರೆ ಸರಿಯಲ್ಲ. ಮೊದಲು ನಿಮ್ಮ ಮತ್ತು ಆರೋಪಿಯ ಬಾಂಧವ್ಯ ಸರಿಯಾಗಿದ್ದು, ನಂತರದಲ್ಲಿ ವೈಮನಸ್ಸು ಉಂಟಾಗಿದ್ದರಿಂದ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯು ನಿಮಗೆ 35 ಸಾವಿರ ರೂಗಳನ್ನು ಮಾತ್ರ ನೀಡಬೇಕಾಗಿದ್ದು, ನೀವು ಹೆಚ್ಚುವರಿ ಮೊತ್ತಕ್ಕಾಗಿ ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ 2 ಲಕ್ಷ ಹಣ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತೀರಿ, ಆ ಹಣವನ್ನು ಬ್ಯಾಂಕ್ ನಿಂದ ಹಿಂಪಡೆದಿರುತ್ತೀರಾ ಎಂದರೆ, ಸಾಕ್ಷಿಯು ಆ ಹಣವನ್ನು ನಾನು ನನ್ನ ವ್ಯವಹಾರಕ್ಕಾಗಿ ನಗದಾಗಿ ಇಟ್ಟುಕೊಂಡಿದ್ದೆ ಎಂದು ನುಡಿಯುತ್ತಾರೆ. ಆರೋಪಿ 35 ಸಾವಿರ ರೂಗಳನ್ನು ಮಾತ್ರ ನೀಡಬೇಕಾಗಿದ್ದು, ಆ ಹಣವನ್ನು ಈಗಲೂ ಆರೋಪಿ ನೀಡಲು ತಯಾರಾಗಿರುತ್ತಾರೆ ಎಂದರೆ, ಸಾಕ್ಷಿಯು ಆರೋಪಿಯು 2 ಲಕ್ಷ ಹಣ ನೀಡಬೇಕಾಗಿರುತ್ತದೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ

**ಪಿಡಬ್ಲೂ.1: Rudraprakash**

ಬೆಂಗಳೂರು.